ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/85/2015-16. ದಿನಾಂಕ:08-09-2016.

| ವಾದಿಗಳು | ಪ್ರತಿವಾದಿಗಳು |
| --- | --- |
| 1)ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಟಿ.ವಿ.ಎಸ್. ಷೋರೂಂ ಹತ್ತಿರ 06 ನೇ ವಾರ್ಡ ಕೊಟ್ಟೂರು ಪಟ್ಟಣ<br>2)ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-78.50 ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-78.50. ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ. ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಇವರು ದಿನಾಂಕ: 13-05-2015 ರ ಡಾಕ್ಯುಮೆಂಟ್ ನಂಬರ್: 489/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ದೂಪದಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 15-06-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ವಿಕ್ರಯದಾರರ ಪೈಕಿ ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ. ಇವರು ನಮೂನೆ-21 ಕ್ಕೆ ಸಹಿ ಮಾಡಲು ನೀರಾಕರಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 75/2014-15. ದಿನಾಂಕ 14-07-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 29-12-2015 ರಿಂದ 08-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-78.50. ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ. ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ಇವರಿಂದ ದಿನಾಂಕ 13-05-2015 ರ ಡಾಕ್ಯುಮೆಂಟ್ ನಂಬರ್: 489/2015-16. ರ ಪ್ರಕಾರ ರೂ: 78.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮು.ತಿ.ನೋ:-2

ವಿಚಾರಣೆಯಲ್ಲಿ ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು **ಗೈರು ಹಾಜರಾಗಿರುತ್ತಾರೆ.** ಅವರು ಸದರಿ ವಿವಾದಿತ ಜಮೀನಿನ ತಮ್ಮ ಏನೇಂಬುದರ ಬಗ್ಗೆ ಯಾವುದೇ **ಹೇಳಿಕೆಗಳನ್ನು ನೀಡಿರುವುದಿಲ್ಲ**

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ **ಕಂದಾಯ** ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ವಿಚಾರಣೆಗೆ **ಹಾಜರಾಗಿ ತಮ್ಮ** ತಕರಾರು ಬಗ್ಗೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು **ಕಂಡು** ಬಂದಿದ್ದು. ಸದರಿ ಜಮೀನಿನ ಮಾರಾಟ ಮಾಡಿದವರೇ ಈ ಪ್ರಕರಣದಲ್ಲಿ ತಕರಾರು ನೀಡಿರುವುದರಿಂದ ಮತ್ತು ನೊಂದಾಯಿತ ಕ್ರಯ ಪತ್ರ ರದ್ದು ಪಡಿಸುವ ಅಧಿಕಾರ ಕಂದಾಯ ನ್ಯಾಯಾಲಯದ ವ್ಯಾಪ್ತಿಗೆ ಒಳ ಪಡದೇ ಇರುವುದರಿಂದ ಖರೀದಿ ಪತ್ರದನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ದೂಪದಹಳ್ಳಿ ಗ್ರಾಮದ ಸನಂ 442/5ಪೈಕಿ. ವಿಸ್ತೀರ್ಣ 0-78.50. ಸೆಂಟ್ಸು ಜಮೀನನ್ನು ದಿನಾಂಕ 13-05-2015 ರ ಡಾಕ್ಯುಮೆಂಟ್ ನಂಬರ್: 489/2015-16. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಬಾದಿತರಾದರು ಸಿವಿಲ್ ನ್ಯಾಯಾಲಯದ ಮೋರೆ ಹೋಗಲು ಸೂಚಿಸಲಾಗಿದೆಯೇಂದು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 08-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ವಿ.ಎಸ್.ರಾಕೇಶ ತಂದೆ ದಿವಂಗತ ವಿ.ಶಂಕರಗೌಡ ಟಿ.ವಿ.ಎಸ್.ಷೋರೂಂ ಹತ್ತಿರ 06 ನೇ ವಾರ್ಡ ಅಂಜೀನೇಯ ಬಡಾವಣೆ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಕಾಳಮ್ಮ ಗಂಡ ಲೇಟ್ ಮಲ್ಲಿಕಾರ್ಜುನ ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.

2) ತಕರಾರುದಾರರಾದ ಈರಮ್ಮ ಗಂಡ ಲೇಟ್ ಮಲ್ಲೇಶಪ್ಪ. ದೂಪದಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಆರ್.ರಮೇಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.

3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.

4) ಅಪೀಲು ಅವಧಿ 60 ದಿವಸ ಇರುತ್ತದೆ.